# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 685 |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.12.2024 |
| ಉತ್ತರಿಸಬೇಕಾದ ಸಚಿವರು | : | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಕೃಷಿ ಕೂಲಿ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿಗಳನ್ನು ಒದಗಿಸುವುದು) | ರಾಜ್ಯದಲ್ಲಿ ಕೃಷಿ ಕೂಲಿ ಕಾರ್ಮಿಕರಿಗೆ ಸಂಬಂಧಿಸಿದಂತೆ, ಈವರೆಗೆ ಯಾವುದೇ ಸಮೀಕ್ಷೆ ನಡೆದಿರುವುದಿಲ್ಲ. ಆದ್ದರಿಂದ, ಅವರ ನಿಖರ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ, ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಅಸಂಘಟಿತ ಕಾರ್ಮಿಕರ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ, ಅಭಿವೃದ್ಧಿಪಡಿಸಿರುವ ಇ-ಶ್ರಮ್ ಪೋರ್ಟಲ್‌ನಲ್ಲಿ 406 ಅಸಂಘಟಿತ ವರ್ಗಗಳ ಕಾರ್ಮಿಕರನ್ನು ನೋಂದಾಯಿಸಲಾಗುತ್ತಿದ್ದು, ಸದರಿ ಪೋರ್ಟಲ್‌ನಲ್ಲಿ ಈವರೆಗೆ 57,86,652 ಕೃಷಿ ಕಾರ್ಮಿಕರು ನೋಂದಾಯಿತರಾಗಿರುತ್ತಾರೆ.<br>ನೋಂದಾಯಿತ ಕೃಷಿ ಕೂಲಿ ಕಾರ್ಮಿಕರ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ | ಈ ಕೃಷಿ ಕೂಲಿ ಕಾರ್ಮಿಕರ ಜೀವನ ಭದ್ರತೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ರಾಜ್ಯ ಸರ್ಕಾರವು 43 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಗುರುತಿಸಿದ್ದು ಅದರಲ್ಲಿ ಕೃಷಿ ಕಾರ್ಮಿಕರು ಸಹ ಸೇರಿರುತ್ತಾರೆ. ಪ್ರಸ್ತುತ ಈ ವರ್ಗದ ಕಾರ್ಮಿಕರಿಗೆ ಜೀವನ ಭದ್ರತೆ ಒದಗಿಸುವ ಯಾವುದೇ ಯೋಜನೆಯು ಸರ್ಕಾರದ ಮುಂದೆ ಇರುವುದಿಲ್ಲ. |
| ಇ | ಇವರುಗಳಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; ಇದ್ದಲ್ಲಿ ಅದರ ಸಾಧಕ-ಬಾಧಕಗಳೇನು: (ವಿವರ ಒದಗಿಸುವುದು) | |

| | | |
|---|---|---|
| ಈ | ಈ ಕೃಷಿ ಕೂಲಿ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರದಿಂದ ಜಾರಿಯಲ್ಲಿರುವ ಯೋಜನೆಗಳು ಯಾವುವು; ಹಾಗೂ ಇಂತಹ ಎಷ್ಟು ಮಕ್ಕಳು ಶಾಲೆಗೆ ದಾಖಲಾಗಿದ್ದಾರೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಕೃಷಿ ಕೂಲಿ ಕಾರ್ಮಿಕರ ಮಕ್ಕ ವಿದ್ಯಾಭ್ಯಾಸವನ್ನು ಉತ್ತೇಜಿಸಲು 2022-23ನ ಸಾಲಿನಿಂದ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮವನ್ನು ಭೂರಹಿತ ಕೃಷಿ ಕಾರ್ಮಿಕರ ಮಕ್ಕಳಿಗೂ ವಿಸ್ತರಿಸಲಾಗಿದೆ.<br><br>2022-23ನೇ ಸಾಲಿನಲ್ಲಿ ಒಟ್ಟು 60938 ಕೃಷಿ ಕಾರ್ಮಿಕರ ಮಕ್ಕಳ ರೈತ ವಿದ್ಯಾನಿಧಿ ವಿದ್ಯಾರ್ಥಿ ವೇತನವನ್ನು ವಿತರಿಸಲಾಗಿದೆ.<br><br>ರಾಜ್ಯದಲ್ಲಿ ಕೃಷಿ ಕೂಲಿ ಕಾರ್ಮಿಕರ ಮಕ್ಕಳು ಸೇರಿದಂತೆ ಎಲ್ಲಾ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವತಿಯಿಂದ ಜಾರಿಯಲ್ಲಿರುವ ಯೋಜನೆಗಳು ಕೆಳಕಂಡಂತಿದೆ.<br><br>ವಿದ್ಯಾವಿಕಾಸ ಯೋಜನೆಯಡಿ ಪ್ರೋತ್ಸಾಹದಾಯಕ ಉಪಕ್ರಮಗಳಾದ ಉಚಿತ ಪಠ್ಯಪುಸ್ತಕ, ಅಭ್ಯಾಸ ಪುಸ್ತಕ, ಎರಡು ಜೊತೆ ಸಮವಸ್ತ್ರ, ಶೂ, ಸಾಕ್ಸ್ ಹಾಗೂ ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ (ಮಧ್ಯಾಹ್ನ ಉಪಹಾರ ಯೋಜನೆ) ಅಡಿ ವಾರಕ್ಕೆ ಆರು ದಿನ ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ ಐದು ದಿನ ಕೆನೆ ಭರಿತ ಬಿಸಿ ಹಾಲು, ಈ ಪೈಕಿ ಮೂರು ದಿನ ಸಾಯಿಶೂರ್ ರಾಗಿ ಮಾಲ್ಟ್ ಮಿಶ್ರಿತ ಬಿಸಿ ಹಾಲು, ಪೂರಕ ಪೌಷ್ಟಿಕ ಆಹಾರವಾಗಿ ವಾರಕ್ಕೆ ಆರು ದಿನ ಮೊಟ್ಟೆ / ಬಾಳೆಹಣ್ಣು/ಚಿಕ್ಕಿ ಇವುಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. |

ಸಂಖ್ಯೆ:AGRI/216/AML/2024

**(ಎನ್. ಚಲುವರಾಯಸ್ವಾಮಿ)**
**ಕೃಷಿ ಸಚಿವರು.**

ಅನುಬಂಧ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು)ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:685ಕ್ಕೆ ಅನುಬಂಧ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಜಿಲ್ಲಾವಾರು ಮಾಹಿತಿ

| ಕ್ರ.ಸಂ | ಜಿಲ್ಲೆ | **ಇ-ಶ್ರಮ್ ನೋಂದಾಯಿತ ಕೃಷಿ ಕಾರ್ಮಿಕರು (ದಿನಾಂಕ:12-12-2024ಕ್ಕೆ)** |
|---|---|---|
| 1 | ಬಾಗಲಕೋಟೆ | 246719 |
| 2 | ಬಳ್ಳಾರಿ | 282296 |
| 3 | ಬೆಳಗಾವಿ | 556014 |
| 4 | ಬೆಂಗಳೂರು ಗ್ರಾಮಾಂತರ | 78623 |
| 5 | ಬೆಂಗಳೂರು ನಗರ | 50742 |
| 6 | ಬೀದರ್ | 258146 |
| 7 | ಚಾಮರಾಜನಗರ | 144200 |
| 8 | ಚಿಕ್ಕಬಳ್ಳಾಪುರ | 136343 |
| 9 | ಚಿಕ್ಕಮಗಳೂರು | 119665 |
| 10 | ಚಿತ್ರದುರ್ಗ | 194024 |
| 11 | ದಕ್ಷಿಣ-ಕನ್ನಡ | 68906 |
| 12 | ದಾವಣಗೆರೆ | 166771 |
| 13 | ಧಾರವಾಡ | 151250 |
| 14 | ಗದಗ | 112579 |
| 15 | ಹಾಸನ | 173929 |
| 16 | ಹಾವೇರಿ | 211330 |
| 17 | ಕಲಬುರಗಿ | 399679 |
| 18 | ಕೊಡಗು | 35252 |
| 19 | ಕೋಲಾರ | 142022 |
| 20 | ಕೊಪ್ಪಳ | 173027 |
| 21 | ಮಂಡ್ಯ | 200738 |
| 22 | ಮೈಸೂರು | 255958 |
| 23 | ರಾಯಚೂರು | 288996 |
| 24 | ರಾಮನಗರ | 106498 |
| 25 | ಶಿವಮೊಗ್ಗ | 194880 |
| 26 | ತುಮಕೂರು | 218943 |
| 27 | ಉಡುಪಿ | 68240 |
| 28 | ಉತ್ತರ-ಕನ್ನಡ | 128376 |
| 29 | ವಿಜಯನಗರ | 63816 |
| 30 | ವಿಜಯಪುರ | 387160 |
| 31 | ಯಾದಗಿರಿ | 171530 |
| | **ಒಟ್ಟು** | **57,86,652** |

**ಜಂಟಿ ಕಾರ್ಮಿಕ ಆಯುಕ್ತರು ಹಾಗೂ**
**ಜಂಟಿ ಕಾರ್ಯದರ್ಶಿ**
**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ**
**ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.**